RENOVATION OF GOPURAM OF LORD SRI NARASIMHASWAMY'S TEMPLE

724 SRI K. PUTTASWAMY (Chamundeshwari) [on behalf of SRI A. D. BILLIGOWDA (Maddur] — Will the Minister for Revenue be pleased to state.

the action taken to renovate the dilapidated Gopuram of Lord Shri Narasimha Swamy's Temple at Maddur?

SRI N. HUTCHAMASTY GOWDA (Minister for Revenue).— The plan and estimate of the work are under progress.

ಶ್ರೀ ಕೆ. ಪುಟ್ಟಸ್ವಾಮಿ — ಸ್ವಾಮಿ, ಈ ದೇವಸ್ಥಾನದ ಪ್ಲಾನ್ ಮತ್ತು ಎಸ್ಟಿಮೇಟ್ ಯಾವ ಕಾಲದಿಂದ ಮಾಡುತ್ತಾ ಇದ್ದೀರಿ ಮತ್ತು ಇದು ಯಾವಾಗ ಮುಗಿಯುತ್ತದೆ ಮತ್ತು ಇದರ ಕೆಲಸವನ್ನು ಯಾವಾಗ ಪ್ರಾರಂಭ ಮಾಡುತ್ತೀರಾ?

†ಶ್ರೀ ಎನ್. ಹುಚ್ಚಮಾಸ್ತಿಗೌಡ — ಈ ದೇವಸ್ಥಾನದ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರಾಗಬೇಕು ಎಂದು ಬಹಳ ದಿವಸದಿಂದಲೂ ಹೇಳುತ್ತಿದ್ದೇನೆ. ಮತ್ತು ಈ ಬಗ್ಗೆ ಸರ್ಕಾರಕ್ಕೆ ಪತ್ರವಿ ಬಂದ ಮೇಲೆ ಆದಷ್ಟೂ ಕಾಲ ಕಳುಹಿಸಿಕೊಟ್ಟಿದೆ. ಈ ತರಹದಲ್ಲೇ ಹಿಂದಿನ ಸರ್ಕಾರದಿಂದಲೂ ಬಂದಿದೆ. ಈಗ ಅದನ್ನು ತಯಾರು ಮಾಡಿ ಬೇಗ ಕಳುಹಿಸಿ ಎಂದು ಹೇಳಿದ್ದೇನೆ. ಮತ್ತು ಇದಕ್ಕೆ ಬೇಕಾದ ಹಣ ಒದಗಿಸುವುದಕ್ಕೆ ಯಾವ ರೀತಿ ಮಾಡಬೇಕು ಎನ್ನುವ ಒಂದು ಪ್ರಶ್ನೆಯೂ ಇದೆ.

ಶ್ರೀ ಕೆ ಪುಟ್ಟಸ್ವಾಮಿ. — ಹಾಗಾದರೆ ಇದಕ್ಕೆ ಹಣ ಒದಗಿಸುವುದಕ್ಕೆ ಏನು ಏರ್ಪಾಡು ಮಾಡಿದ್ದೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಈಗ ಇರತಕ್ಕಂಥ ಸ್ಥಿತಿಯಲ್ಲಿ ಹೇಳಬೇಕಾದರೆ ದೇವಸ್ಥಾನದ ಫಂಡ್‌ನಲ್ಲಿ ೯೭೦೬ ರೂಪಾಯಿ ೩೭ ಪೈಸೆ ಅಷ್ಟು ಮಾತ್ರ ಇದೆ. ಇದರ ಪ್ಲಾನ್ ಮತ್ತು ಎಸ್ಟಿಮೇಟ್ ತಯಾರು ಮಾಡಿದ ಮೇಲೆ ಜನರಲ್ ಮುಜರಾಯ್ ಫಂಡ್‌ನಿಂದ ಅರ್ಧಭಾಗ ಕೊಟ್ಟು ಇನ್ನು ಉಳಿದ ಅರ್ಧಭಾಗವನ್ನು ಅಲ್ಲಿಯ ಭಕ್ತಾದಿಗಳಿಂದ ವಸೂಲ್ಮಾಡಿಕೊಡುವುದಾದರೆ ಆ ಕೆಲಸವನ್ನು ಪೂರೈಸಂವುದಕ್ಕೆ ಸಾಧ್ಯವಾಗುತ್ತದೆ.

ALIENATION OF LAND GRANTED TO S.Cs./S.Ts. AND O B.Cs. IN SHIMOGA DISTRICT

739 SRI K. YENKATAPPA (Shikaripur).— Will the Minister for Revenue be pleased to state.

(*a*) the extent of land granted to Scheduled Caste/Scheduled Tribes and backward class people in each taluk of Shimoga district since independence;

(*b*) whether it has come to the notice of the Government that land granted to these people in Shikaripur taluk has been alienated;

(*c*) if so, the lands alienated; the villages in which they have been alienated and the names of the sellers and purchasers;

(*d*) if alienated, their details may be furnished;

(*e*) if they could not be alienated as per the law, the action Government would take?

SRI N. HUTCHAMASTY GOWDA (Minister for Revenue).—

(*a*)

Shimoga	Bhadravathi	Honali
A G	A G	A G
12,788—30	3,516—13	4,323—00
Channagiri	Thirthahalli	Sagar
A G	A G	A G
7,497—3½	276—24	15,055—01
Sorab	Shikaripura	Hosanagara
A G	A G	A G
702—32	3,49 —00	1,929—29
	Total	49,596—11½

(*b*) Yes.

(*c*) and (*d*) Statement placed on the Table of the House

(*e*) Khatas have not been transferred to the names of th purchasers. Action has been, and is beeing, taken to cancel the grant of land.

ಶ್ರೀ ಕೆ. ಯಂಕಟಪ್ಪ:— ಸ್ವಾಮಿ, ತಾವು ಕೊಟ್ಟಿರುವ ಪಟ್ಟಿಯ ರೀತ್ಯಾ ಶಿವಮೊಗ್ಗಾ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲೂ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗಗಳಿಗೆ ಭೂಮಿ ಹಂಚಿಕೆ ಮಾಡಿದ್ದೀರಿ. ಆದರೆ ಶಿಕಾರಿಪುರ ತಾಲ್ಲೂಕಿನಲ್ಲಿ ಈ ಜನಾಂಗಗಳಿಗೆ ಕೊಟ್ಟಿರುವುದು ಕೇವಲ ೧೬ ಎಕರೆ ೧೫ ಗುಂಟೆ ಮಾತ್ರ. ೧೯೭೨ ರಿಂದ ಇಲ್ಲಿಯವರೆಗೆ ಏನು ಭೂಮಿ ಹಂಚಿಕೆ ಮಾಡಿದ್ದೀರಿ ಅಂತನ್ನು ಈ ಪಟ್ಟಿಯಲ್ಲಿ ಕೊಟ್ಟಿದ್ದೀರಿ. ಆದರೆ ಈ ಸಂದರ್ಭದಲ್ಲಿ ನಾನು ಹೇಳುವುದಾದರೆ ಈ ಪಟ್ಟಿಯಲ್ಲಿ ಏನು ಕೊಟ್ಟಿದ್ದೀರೋ ಅವು ಸಂಪೂರ್ಣವಾಗಿ ಪರಭಾರೆಯಾಗಿದೆ ಆದುದರಿಂದ ಸರ್ಕಾರದಪರು ಪರಭಾರೆ ಆಗಿದ್ದಂಥ ಜಮೀನನ್ನು ಉಳಿಸಲಿಕ್ಕೆ ಏನಾದರೂ ಒಂದು ಕಾನೂನು ಮಾಡಿ ಪುನಃ ಆ ಜಮೀನನ್ನು ಅವರಿಗೇನೆ ಉಳಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಈ ತರಹ ಪರಭಾರೆ ಮಾಡುವುದು ಕಾನೂನು ಬಾಹಿರ ನಿಷೇಧ ಎಂದೂ ಈ ಬಗ್ಗೆ ಒಂದು ಸರ್ಕ್ಯುಲರನ್ನು ಸರ್ಕಾರ ಈಗಾಗಲೇ ಕಳುಹಿಸಿಕೊಟ್ಟಿದೆ. ನನಗೆ ಗೊತ್ತಿರುವ ಹಾಗೆ ಈ ಒಂದು ಸರ್ಕ್ಯುಲರ್‌ನ್ನು ೧೯೭೯ರಲ್ಲಿ ಕಳುಹಿಸಿದೆ. ಮೊದಲನೆಯದಾಗಿ ಪರಭಾರೆ ಮಾಡುವುದು ನಿಷೇಧ, ಇದರ ಜೊತೆಗೆ ಅವರು ಪರಭಾರೆ ಮಾಡಿದರೆ ಆ ಜಮೀನುಗಳನ್ನು ಸರ್ಕಾರದ ಸ್ವಾಧೀನಕ್ಕೆ ತೆಗೆದುಕೊಂಡು ಬಿಡಬೇಕಾಗುತ್ತದೆ ಎಂದು ಮೊದಲು ತಿಳಿಸಿದ್ದರೆ ಈ ರೀತಿ ಪರಭಾರೆ ಆಗುತ್ತಿರಲಿಲ್ಲ. ಸರ್ಕಾರ ಆ ಬಗ್ಗೆ ಈಗಾಗಲೇ ಕಾರ್ಯಕ್ರಮ ತೆಗೆದುಕೊಂಡಿದೆ.

ಶ್ರೀ ಕೆ. ಯಂಕಟಪ್ಪ.— ಈ ಕಾರ್ಯಕ್ರಮ ಕೈಗೊಂಡಿರುವುದೂ ಸರಿ ಮತ್ತು ತಾವು ೧೯೭೯ರಲ್ಲಿ ಈ ಬಗ್ಗೆ ಒಂದು ಸರ್ಕ್ಯುಲರ್‌ನ್ನು ಕಳುಹಿಸಿದ್ದೂ ಇವೆಲ್ಲಾ ಸರಿಯೇ, ಆದರೆ ಈಗ ಜಮೀನು ಏನು ಕೊಟ್ಟಿದ್ದೀರೋ ಅವರು ಆ ಜಮೀನನ್ನು ನಾನಾ ಕಾರಣಗಳಿಂದ ಬೇರೆಯವರಿಗೆ ಕೊಡಬೇಕೆಂದು ಮಾಡಿದರೂ ಕೂಡ, ಈ ಜಮೀನು ಹೊಂದಿರುವವರ, ಕೈಯಲ್ಲೇ ಇರುವ ರೀತಿಯಲ್ಲಿ ಮತ್ತು ಜಮೀನು ತೆಗೆದುಕೊಳ್ಳುವವರು ಅದನ್ನು ತೆಗೆದುಕೊಳ್ಳದೇ ಇರುವ ರೀತಿಯಲ್ಲಿ ಯಾವ ಕಾರಣದಿಂದಲೂ ತೆಗೆದುಕೊಳ್ಳದೇ ಇರುವ ರೀತಿಯಲ್ಲಿ ಈ ಬಗ್ಗೆ ಏನಾದರೂ ಒಂದು ಕಾನೂನು ತರುವುದಕ್ಕೆ ಪ್ರಯತ್ನ ಮಾಡುತ್ತೀರಾ? ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಈಗ ನೀವು ಕೊಟ್ಟಿರುವ ೩ ಸಾವಿರ ಎಕರೆ ಯಲ್ಲಿ ಸುಮಾರು ೨೧೦ ಸಾವಿರ ಎಕರೆ ಜಮೀನು ಈಗಾಗಲೇ ಪರಭಾರೆಯಾಗಿದೆ. ಇದು ಕಾನೂನಿಗೆ ತದ್ವಿರುದ್ಧವಾಗಿದೆ. ಮತ್ತು ಕರ್ನಾಟಕ ರಾಜ್ಯದಲ್ಲಿ ಈ ತರಹ ಎಷ್ಟೋ ಆಗಿರಬಹುದು ಎನ್ನುವ ಒಂದು ಸಂಶಯ ಬಂದಿರುವುದರಿಂದ ಈ ಬಗ್ಗೆ ಏನಾದರೂ ಕಾನೂನನ್ನು ಮಾರ್ಪಾಡು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

*Copy placed in the Karnataka Legislature Library *vide* No. 53, dated 8th May 1974.

ಶ್ರೀ ಎನ್. ಹುಚ್ಚಮಾಸ್ತಿಗೌಡ.— ನಾವು ಮಾಡಿರತಕ್ಕಂಥ ಕಾನೂನಿನ ಮೇಲೆ ಕ್ರಮ ತೆಗೆದುಕೊಳ್ಳಬೇಕೆ ಹೊರತು ಮತ್ತೆ ಯಾವ ರೀತಿಯಲ್ಲೂ ಮಾಡುವುದಕ್ಕೆ ಸರಿಹೋಗುವುದಿಲ್ಲ ಮಾನ್ಯ ಸದಸ್ಯರಿಗೆ ಏನಾದರೂ ಈ ಬಗ್ಗೆ ಗೊತ್ತಿದ್ದರೆ ಅಥವಾ ಯಾವುದಾದರೂ ಸಲಹೆಗಳು ಇದ್ದರೆ ತಿಳಿಸಬೇಕು. ಈಗ ಇರತಕ್ಕಂಥ ಕಾನೂನಿನಲ್ಲೇ ಆ ರೀತಿ ಮಾಡಿದರೆ ನಿಷೇಧ ಎಂದು ಇದೆ. ಇಷ್ಟೇ ಅಲ್ಲದೆ ಈ ಜಮೀನನ್ನು ಕೊಡುಕೊಳ್ಳುವವರ ಹೆಸರಿನಲ್ಲಿ ಖಾತೆ ಮಾಡುವುದಿಲ್ಲ ಮತ್ತು ಅವರು ಕಾದಾಯ ಕೊಟ್ಟನೆ ಅಪರ ಹೆಸರಿನಲ್ಲಿ ಜಮಾ ತೆಗೆದುಕೊಳ್ಳುವುದಿಲ್ಲ. ಯಾರ ಹೆಸರಿನಲ್ಲಿ ಜಮೀನು ಇರುತ್ತದೊ ಅವರ ಹೆಸರಿನಲ್ಲಿ ಜಮಾ ಮಾಡುತ್ತಾರೆ ಇಷ್ಟೇ ಅಲ್ಲದೆ ಮೊಟ್ಟ ಮೊದಲು ಈ ಜಮೀನುಗಳನ್ನ ತೆಗೆದುಕೊಳ್ಳುವಾಗ ಈ ಬಗ್ಗೆ ಏನಂ ಷರತ್ತುಗಳನ್ನು ಹಾಕಿದ್ದೇವೊ ಅದನ್ನು ನೋಡಿದರೆ ಮಾನ್ಯ ಸದಸ್ಯರಿಗೆ ಸ್ಪಷ್ಟವಾಗಿ ಗೊತ್ತಾಗಬಹುದು ಇಷ್ಟೇ ಅಲ್ಲದೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್‌ನಲ್ಲಿಯೂ ಸಹ ಈ ಪರಭಾರೆ ವಿಚಾರದಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಇಷ್ಟೆಲ್ಲಾ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಇದರ ಮೇಲೆ ಇನ್ನು ಏನು ಪ್ರತಿಬಂಧಕ ಹಾಕಬಹುದು ಎನ್ನುವುದನ್ನು ತಿಳಿಸಿದರೆ ಅದನ್ನು ಆಲೋಚನೆ ಮಾಡುತ್ತೇನೆ.

ಶ್ರೀ ಎಸ್ ಎಂ. ವೀರನಗೌಡ ಚಂದ್ರಶೇಖರ್.—ಶಿವಮೊಗ್ಗ ಹಾಗೂ ಭದ್ರಾವತಿ ತಾಲ್ಲೂಕುಗಳಲ್ಲಿ ಯಾವ್ಯಾವ ಹರಿಜನರಿಗೆ ಗ್ರ್ಯಾಂಟಾಗಿ ಭೂಮಿಯನ್ನು ಕೊಟ್ಟು ಅವರ ಹೆಸರನ್ನು ಪಾತೆಯಲ್ಲಿ ನಮೂದಿಸಿದರೋ ಅದು ಸರಿಯಲ್ಲ ಎಂದು ಹೈ ಕೋರ್ಟಿನವರೆಗೆ ಹೋಗಿ ಯಾವ ಕ್ಲಾಜು ಎಂದು ತಾವು ಇಷ್ಟಿ ಹೇಳಿದರೋ ಅದನ್ನು ಹೈ ಕೋರ್ಟಿನಲ್ಲಿ ವಜಾ ಮಾಡಿದರು. ಆನಂತರ ಇದರಲ್ಲಿಲ್ಲ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಪ್ರಕಾರ ಸೆಕ್ಷನ್ ಹತ್ತರಲ್ಲಿ "Absolute prohibition is void" ಎಂದು ಸ್ಪಷ್ಟವಾಗಿ ಹೇಳುತ್ತದೆ. ಇದಕ್ಕಾಗಿ ತಾವೇನಾದರೂ ಒಂದು ಅಮೆಂಡ್‌ಮೆಂಟು ತರಬೇಕೆಂದು ಪಾರ್ಲಿಮೆಂಟಿಗೆ ಸಲಹೆ ಮಾಡಿ ತರಿಸಿದರೆ ಆಗ ಇಂತಹ ಪರಭಾಷೆಯನ್ನು ತಪ್ಪಿಸುವುದು. ಇದು ತಮ್ಮ ಗಮನಕ್ಕೆ ಬರಲಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಲ್ಯಾಂಡ್ ಗ್ರ್ಯಾಂಟ್ಸ್ ಆಕ್ಟು ಒಂದು ಮಾದಿರುವುದು ಕರ್ನಾಟಕ ರಾಜ್ಯದ ಎಲ್ಲಾ ಭಾಗಗಳಿಗೂ ಅನ್ವಯವಾಗುವ ರೀತಿಯಲ್ಲಿದೆ. ಇದರಲ್ಲಿ ಹಿಂದೆ ಅನ್ವಯವಾಗುವುದಕ್ಕೂ ಅವಕಾಶವಿದೆ. ಯಾವುದೇ ಕಾಲದಲ್ಲಿ ಇದ್ದರೂ ಇರುವ ದಾಖಲೆಗಳ ಪ್ರಕಾರ ಷರತ್ತುಗಳಿಗೆ ವಿರೋಧವಾಗಿ ಹೋಗಲು ಸಾಧ್ಯವಿಲ್ಲ ಎಂದು ಇದರಲ್ಲಿ ಸ್ಪಷ್ಟವಾಗಿದೆ. ಈ ಮಧ್ಯೆ ಒಂದು ವರ್ಷದಿಂದ ಸಾಗುವಳಿ ಚೀಟಿಯನ್ನಿ ಕೊಟ್ಟಿಲ್ಲ ಎಂದರೆ ಷರತ್ತುಗಳಿಗೆ ವಿರೋಧವಾಗಿದ್ದರೆ ಅದು ಹೈ ಕೋರ್ಟುಗಳಿಗೆ ಹೋಗಿರಬಹುದು. ಸಾಗುವಳಿ ಚೀಟಿಯಲ್ಲಿ ಇವರ ಹೆಸರುಗಳು ಸ್ಪಷ್ಟವಾಗಿದ್ದರೆ ಮತ್ತು ರೂಲ್ಸುಗಳಲ್ಲಿರುವ ಷರತ್ತುಗಳಿಗನುಸಾರವಾಗಿದ್ದರೆ ಇದರ ಮೇಲೆ ಏನೂ ಮಾಡುವ ಹಾಗಿಲ್ಲ. ಆದರೆ ಷರತ್ತುಗಳಿಗೆ ವಿರೋಧವಾಗಿ ಹೋಗಿ ಸಾಗುವಳಿ ಚೀಟಿ ಇಲ್ಲದೆ ಇದ್ದರೆ ಅವರ ಮೇಲೆ ತಕ್ಕ ಕ್ರಮ ತೆಗೆದುಕೊಳ್ಳಲು ಅಧಿಕಾರಿಗಳಿಗೆ ಇದರಲ್ಲಿ ಅವಕಾಶವಿದೆ.

ಶ್ರೀ ಕಾಗೋಡು ತಿಮ್ಮಪ್ಪ.—ಷರತ್ತುಗಳಿಗೆ ವಿರೋಧವಾಗಿದ್ದರೆ ಅದನ್ನು ನಿಷೇಧ ಮಾಡುತ್ತೇವೆಂದು ಹೇಳಿದಿರಿ ಇದುವರೆಗೆ ಹಾಗೆ ಎಷ್ಟು ಭೂಮಿ ಸರಕಾರಕ್ಕೆ ವಾಪಸ್ಸು ಬಂದಿದೆ ? ಇದುವರೆಗೆ ಯಾವ ಕಾರ್ಯಕ್ರಮವನ್ನೂ ಇಂತಹ ಕಡೆಗಳಲ್ಲಿ ತೆಗೆದುಕೊಳ್ಳದೇ ಇರಲು ಕಾರಣಗಳಾದರೂ ಏನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರಕಾರಕ್ಕೆ ಎಷ್ಟು ವಾಪಸು ಬಂದಿದೆ ಎನ್ನುವ್ಷಿವಿವರಗಳು ನನ್ನಲ್ಲಿಲ್ಲ ಇಂತಹ ಸಂದರ್ಭಗಳಲ್ಲಿ ಅಧಿಕಾರಿಗಳಿಗೆ ಕಡ್ಡಾಯವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದ್ದೇವೆ,

ಶ್ರೀ ಎ ವಿ. ಮುನಿಸ್ವಾಮಿ.—ಷೆಡ್ಯೂಲು ಕ್ಯಾಸ್ಟು ವರ್ಗದವರು ಇದ್ದರೂ ಇದರಲ್ಲಿ ಬರುವುದಿಲ್ಲ ಎಂದ ಮೇಲೆ ಈಗ ಲ್ಯಾಂಡು ರಿಫಾರಾಸ್ ಆಕ್ಟು ಬಂದಿರುವುದರಿಂದ ಹಿಂದುಳಿದ ವರ್ಗದವರೇ ಅನುಭವ ದಾರರಾಗಿ ಕೆಲಸ ಮಾಡುತ್ತಿರುವುದರಿಂದ ಇವರಿಗೆ ಆ ಜಮೀನು ಅನುಭವದಲ್ಲಿದೆ ಎಂದು ಕೊಡಲು ಬರುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದಕ್ಕೂ ಅದಕ್ಕೂ ಸಂಬಂಧವಿಲ್ಲ.

ಶ್ರೀ ಕೆ. ವೆಂಕಟಪ್ಪ.—ಇದರ ಬಗ್ಗೆ ಸರ್ಕ್ಯುಲರು ಕಳುಹಿಸತಕ್ಕ ಕ್ರಮಗಳನ್ನು ತೆಗೆದುಕೊಳ್ಳಲು ಆದೇಶ ಕಳಿಸುತ್ತೇವೆಂದು ಹೇಳಿದಿರಿ. ಆದರೆ ಇದರ ಬಗ್ಗೆ ನಾವು ಅಧಿಕಾರಿಗಳಿಗೆ ತಿಳಿಸಿ ಒಂದು ವರ್ಷ ಹಾಗೂ ಯಾವ ಕ್ರಮವನ್ನೂ ಅವರು ತೆಗೆದುಕೊಳ್ಳುತ್ತಿಲ್ಲ. ಒಂದು ಉದಾಹರಣೆ ಹೇಳಬೇಕಾದರೆ

ಹತ್ತು ವರ್ಷಗಳ ಅವಧಿ ಸಾಗುವಳಿ ಚೀಟಿಗೆ ಇದ್ದರೆ ಇದರಲ್ಲಿ ಒಂಬತ್ತು ವರ್ಷಗಳು ಕಳೆದು ಹತ್ತು ತಿಂಗಳಾಗಿರುತ್ತವೆ, ಆಗ ಇದನ್ನು ಕ್ಯಾನ್‌ಸಲ್ ಮಾಡಬೇಕೆಂದು ಅಲ್ಲಿನ ತಾಲ್ಲೂಕಾ ಅಧಿಕಾರಿಗಳಿಗೆ ತಿಳಿಸಲು ಹೋದರೆ ಅದನ್ನು ಇನ್ನೂ ಮುಂದುವರಿಸಲು ಇನ್ನಷ್ಟು ಕಾಲ ಕೊಡುತ್ತಾರೆ. ಇದು ಸರಿಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದಕ್ಕೆ ಕೆಲವು ನಿಯಮಗಳು ಇರುತ್ತವೆ. ಯಾವುದಾದರೂ ವಿಶೇಷ ಸಂದರ್ಭಗಳಲ್ಲಿ ಹದಾರು ವರ್ಷಗಳು ಕಳೆದ ಮೇಲೂ ಕೂಡ ಇವರಿಗಿರಕ್ಕ ಅರ್ಧ ಭಾಗವನ್ನು ಸರಕಾರಕ್ಕೆ ಕೊಟ್ಟು ಉಳಿಕೆಯಾದುದನ್ನು ಪರಭಾರೆ ಮಾಡುವುದಕ್ಕೆ ಸಾಧ್ಯವಿದೆ ಎಂದೂ ಕೆಲವು ನಿದರ್ಶನ ಗಳಿಗಂದ ಗೊತ್ತಾಗಿದೆ. ಈ ರೀತಿ ಇರುವ ಸಂದರ್ಭಗಳಲ್ಲಿ ಸರಕಾರ ಸರಿಹೊಂದು ತೀರ್ಮಾನ ತೆಗೆದುಕೊಂಡು ಮಾಡಬೇಕಾಗುತ್ತದೆ. ಅಲ್ಲಿ ಸ್ಥಳದಲ್ಲಿರುವವರೇ ಮಾಡಿಕೊಳ್ಳಲು ಆಗುವುದಿಲ್ಲ. ಮಾನ್ಯ ಸದಸ್ಯರು ಹೇಳುವ ಸಲಹೆಯಂತೆ ನಾನು ಅಧಿಕಾರಿಗಳಿಗೆ ಕಡ್ಡಾಯವಾದ ಆದೇಶವನ್ನು ಕಳುಹಿಸಿ ತಕ್ಕ ಕ್ರಮ ತೆಗೆದುಕೊಳ್ಳಲು ಅವರಿಗೆ ತಿಳಿಸುತ್ತೇನೆ.

ಶ್ರೀ ಕೆ. ಯಂಕಟಪ್ಪ.—ನಮಗೆ ಒದಗಿಸಿರುವ ಪಟ್ಟಿಯಲ್ಲಿ ಕಂನೇಗಲ್ಲು ಎಂಬ ಗ್ರಾಮ ಇದೆ. ಇಲ್ಲಿ ಸಾಕಷ್ಟು ಶೀಮಂತ ವರ್ಗದವರೇ ಇದ್ದಾರೆ ಮತ್ತು ಹರಿಜನರಿಗೆ ಸೇರಿದ ಎಲ್ಲ ಜಮೀನುಗಳೂ ಹರಿ ಜನರಿಗೆ ಸೇರಿದ್ದರೂ ಇವು ಯಾವುವೂ ರಿಜಿಸ್ಟರು ಆಗಿಲ್ಲ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಂಬಂಧಪಟ್ಟ ಅಧಿಕಾರಿಗಳಿಗೆ ಕೂಡಲೇ ತಕ್ಕ ಕಾರ್ಯಕ್ರಮ ವನ್ನು ಕಾನೂನು ಪ್ರಕಾರ ತೆಗೆದುಕೊಳ್ಳಲು ತಿಳಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ತಮಗೆ ಗೊತ್ತಿರುವ ಹಾಗೆ ಹರಿಜನರು ಹಿಂದಿಂಳಿದವ ರಾಗಿರುವುದರಿಂದ ಅವರ ಜಮೀನುಗಳು ಯಾವಾಗಲೂ ಪರಭಾರೆಯಾಗುತ್ತವೆ. ಈ ರೀತಿ ಆಗದೆ ಇರುವಂತಹ ಕಾರ್ಯಕ್ರಮವನ್ನು ತಾವೇಕೆ ಹಾಕಿಕೊಳ್ಳಬಾರದು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕಾನೂನಿಗೆ ವಿರೋಧವಾಗಿದ್ದರೆ ಆಗ ಮಾಡಬಹುದು.

MADAM SPEAKER.—Question No. **742** and 826 are held over.

MALPRACTICES AT MANGALORE CO-OPERATIVE STORES

422. SRI. U. T. FAREED (Mangalore).—

Will the Minister for Co-operation be pleased to state :

(a) whether it is a fact that Mangalore Co-operative Stores ; which was having more than a lakh of rupees as reserves has now suffered a loss of more than a lakh of rupees ;

(b) whether there is any malpractices in Bijai and Arwa branches of the said society and has it come to the notice of the Government ;

(c) if so, whether the Assistant Registrar of Co-operative Societies has registered cases against them ?

SRI. C. N. PATIL (Minster for Co-operation).—

(a) The loss sustained is Rs. 85,124 and not one lakh of rupees.

(b) Matter is under investigation.

(c) Do